ಕೆಲವು ಸಲ ಲಕ್ಷ್ಮಣ ರೇಖೆ ಎಂದು ಏನು ಹೇಳುತ್ತೀರಿ, ಆ ರೇಖೆಯನ್ನು ಮೀರಿ ವರ್ತಿಸತಕ್ಕಂಥದ್ದು ಕೆಲವು ಸಲ ದೊಡ್ಡವರು ಮಾಡುತ್ತಾರೆ ಎನ್ನುವುದಕ್ಕೆ ಇದು ಒಂದು ಉದಾಹರಣೆ. ಏನೇ ಇರಲಿ, ಒಬ್ಬ ಮೇಧಾವಿ ಇವತ್ತು ನಮ್ಮಿಂದ ಆಗಲಿ ಹೋಗಿದ್ದಾರೆ. ಅವರಿಗೆ ತುಂಬು ಹೃದಯದ ಶ್ರದ್ಧಾಂಜಲಿಯನ್ನು ನನ್ನ ಪರವಾಗಿ ಹಾಗೂ ಸದನದ ಪರವಾಗಿ ಅರ್ಪಿಸುತ್ತೇನೆ.

**ಅಧ್ಯಕ್ಷರು:** ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಮಾನ್ಯ ಸದಸ್ಯರೆಲ್ಲರೂ ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

**ಅಧ್ಯಕ್ಷರು:** ಈಗ ಪ್ರಶ್ನೋತ್ತರ.

**ಶ್ರೀ ಮಲ್ಲಿಕಾರ್ಜುನ ಖರ್ಗೆ:** ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರಕ್ಕೆ ಮುಂಚೆ ಮಾನ್ಯ ಮುಖ್ಯಮಂತ್ರಿಗಳಿಗೆ ಪುರುಸೊತ್ತಿಲ್ಲವೋ ಹೇಗೆ ಎಂದು ಸ್ಪಷ್ಟವಾಗಿ ಹೇಳಿ.

**ಅಧ್ಯಕ್ಷರು:** ಸ್ವಲ್ಪ ತಡವಾಗಿ ಬರುತ್ತೇನೆಂದು ಹೇಳಿದ್ದಾರೆ.

**ಶ್ರೀ ಮಲ್ಲಿಕಾರ್ಜುನ ಖರ್ಗೆ:** ನೀವು ಅವರನ್ನು consult ಮಾಡಿಯೇ ಸಮಯ ನಿಗದಿ ಮಾಡುತ್ತೀರಿ. ಇದು ಏನಾಗುತ್ತದೆ ಅಂದರೆ ನಿಮ್ಮ ಕಾಲದಲ್ಲಿ ಟ್ರೆಡಿಷನ್ಸ್ ಇಲ್ಲ, ರೂಲ್ಸ್ ಇಲ್ಲ, ಏನೂ ಇಲ್ಲ. ಒಂದು ರೀತಿ ಬುಲ್ಡೋಜ್ ಮಾಡಿಕೊಂಡು ಹೋದಂತೆ ಆಗುತ್ತದೆ. ಏನೋ ಸರ್ಕಾರ ಇದೆ, ಇದು ಡೆಮಾಕ್ರಟಿಕ್ ಗವರ್ನಮೆಂಟ್? ಅಥವಾ ಫ್ಯಾಸಿಸ್ಟ್ ಗವರ್ನಮೆಂಟೇ ಅಥವಾ ಡಿಕ್ಟೇಟರ್‌ಶಿಪ್ಪೋ ನನಗೇನೂ ಅರ್ಥವಾಗುವುದಿಲ್ಲ. ಸದನ ಪ್ರಾರಂಭದ ದಿವಸವೇ ಇಲ್ಲವೆಂದರೆ ಹೇಗೆ? ಅವರಿಗೆ ಕೇಳಿ ನೀವು ಸಮಯ ನಿಗದಿ ಮಾಡುತ್ತೀರಿ, ಡೇಟ್ ನಿಗಧಿ ಮಾಡುತ್ತೀರಿ, ಕ್ಯಾಬಿನೆಟ್‌ನಲ್ಲಿ ಏನು ಡೇಟ್ ಫಿಕ್ಸ್ ಮಾಡುತ್ತಾರೆ ಅದನ್ನೇ ನೀವು ಒಪ್ಪಿಕೊಳ್ಳುತ್ತೀರಿ, ತಾವೂ ನಮ್ಮ ರಕ್ಷಣೆಗೆ ಬರುವುದಿಲ್ಲ, ಅವರಿಗಂತೂ ಪ್ರಜಾಪ್ರಭುತ್ವ ಇದೆ ಎನ್ನುವ ನೆನಪು ಇಲ್ಲ, I am very sorry for this. ನಾವು ಪದೇ ಪದೇ ಎಷ್ಟು ಸಾರಿ ಹೇಳುವುದಕ್ಕಾಗುತ್ತದೆ? ಪ್ರಜಾಪ್ರಭುತ್ವದಲ್ಲಿ ಸಮಸ್ಯೆಗಳನ್ನು ಚರ್ಚೆಯಿಂದ ಬಗೆಹರಿಸಿಕೊಳ್ಳಬಹುದು. ಸೂಚನೆ ಕೊಡಬಹುದು, ಕೇಳಿಕೊಳ್ಳಬಹುದು, ಇಲ್ಲ, ನೀವು ಮಾಡಿದ್ದೇ ಮಾಡಿ ನಾವು ಹೇಳಿದ್ದೇ ಹೇಳುತ್ತೇವೆಂದರೆ ಅದಕ್ಕೆ ಏನು ಅರ್ಥ ಇದೆ?

**ಅಧ್ಯಕ್ಷರು:** ಸ್ವಲ್ಪ ತಡವಾಗಿ ಬರುತ್ತೇನೆಂದು ಹೇಳಿ ಅನುಮತಿ ತೆಗೆದುಕೊಂಡಿದ್ದಾರೆ.

**ಶ್ರೀ ಮಲ್ಲಿಕಾರ್ಜುನ ಖರ್ಗೆ:** ತಡವಾಗಿಯಾದರೂ ಬರಲಿ, ಬಂದರೆ ನಿಮ್ಮ ಮನೆಯಲ್ಲಿಯೇ ಇಟ್ಟುಕೊಳ್ಳಿ. ಸದನಕ್ಕೆ ಗೌರವ ಕೊಡಬೇಕು. ಸದನದಲ್ಲಿ ಅವರಿಂದ ಬೇರೆಯರು ಕಲಿಯಬೇಕು,.... ಅಧ್ಯಕ್ಷರೆ, ರೂಲ್ 60 ರ ಕೆಳಗೆ,

**ಅಧ್ಯಕ್ಷರು:** ಪ್ರಶ್ನೋತ್ತರ ಆದ ಮೇಲೆ ತೆಗೆದುಕೊಳ್ಳೋಣ.

**ಶ್ರೀ ಮಲ್ಲಿಕಾರ್ಜುನ ಖರ್ಗೆ:** ನಾನು ಏನು ಹೇಳುತ್ತೇನೆಂದು ಕೇಳಿ. ನಿಯಮ 60ರ ಕೆಳಗೆ ನಾನು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ಆ ನಿಲುವಳಿ ಸೂಚನೆಯಲ್ಲಿ ಕೇವಲ ರಾಜ್ಯದಲ್ಲಿ ಹದಗೆಡುತ್ತಿರತಕ್ಕಂತಹ ಕಾನೂನು ವ್ಯವಸ್ಥೆ ಬಗ್ಗೆ ಪ್ರಸ್ತಾಪ ಮಾಡಬೇಕು, ಮೊದಲು ಆ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಿ. ತದ ನಂತರ ಈ ಚರ್ಚೆ ಮುಗಿದ ಮೇಲೆ ಬೇಕಾದರೆ ಪ್ರಶ್ನೋತ್ತರ ತೆಗೆದುಕೊಳ್ಳಿ ಎಂದು ನಾನು ಕೇಳಿಕೊಳ್ಳುತ್ತೇನೆ.

**ಅಧ್ಯಕ್ಷರು:** ಮಾನ್ಯ ವಿರೋಧ ಪಕ್ಷದ ನಾಯಕರಲ್ಲಿ ನನ್ನ ಮನವಿ, ಈ ವಿಷಯವನ್ನು ಪ್ರಶ್ನೋತ್ತರ ಆದ ಮೇಲೆ ತೆಗೆದುಕೊಳ್ಳೋಣ.

**ಶ್ರೀ ಮಲ್ಲಿಕಾರ್ಜುನ ಖರ್ಗೆ:** ಬಹಳ ಮುಖ್ಯವಾದ ವಿಚಾರ ಇದೆ. ಬಳ್ಳಾರಿಯಲ್ಲಿ ಗಲಾಟೆ, ಮೈಸೂರಿನಲ್ಲಿ ಗಲಾಟೆ, ಮೈಸೂರಿನಲ್ಲಿ ಮೇಯರ್ ಎಲೆಕ್ಷನ್‌ಲ್ಲಿಯೂ ಗಲಾಟೆ, ಮಂಗಳೂರಿನಲ್ಲಿ ಗಲಾಟೆ, ಕರಾವಳಿಯಲ್ಲಿ ಗಲಾಟೆ, ಜರ್ನಲಿಸ್ಟ್ ಮೇಲೆ ಗಲಾಟೆ, ರೈತರ ಮೇಲೆ ಗಲಾಟೆ, ಒಂದೆರಡು ಇಶ್ಯೂ ಅಲ್ಲ, ಒಂಬತ್ತು ತಿಂಗಳು ಬಿಡಿ, ಇತ್ತೀಚೆಗೆ ಈ ಎರಡು ತಿಂಗಳುಗಳಲ್ಲಿ ಕಾನೂನಿಗೆ ಸಂಬಂಧಪಟ್ಟ ಸಾಕಷ್ಟು ವಿಷಯಗಳನ್ನು ಮತ್ತು ಲಾ ಅಂಡ್ ಆರ್ಡರ್ ಸಮಸ್ಯೆ ಇಲ್ಲಿ ಉದ್ಭವವಾಗಿದೆ. ಅದರಲ್ಲಿ ನಮ್ಮ ಗೃಹಸಚಿವರು ಅವರು ಏಕೆ ಇಷ್ಟು ಲೈಟಾಗಿ ತೆಗೆದುಕೊಳ್ಳುತ್ತಾರೆ ನನಗೆ ಗೊತ್ತಿಲ್ಲ, ನಿಜವಾಗಿ ಹೇಳುತ್ತೇನೆ ಅವರು ಈ ಜಾಗದಲ್ಲಿ ಇರುವುದಕ್ಕೆ ಲಾಯಕ್ಕೆ ಇಲ್ಲ. ನಾನು ಖಂಡಿತವಾಗಿ ಹೇಳುತ್ತೇನೆ. ಅವರ ಕಾಲದಲ್ಲಿ ಆದಷ್ಟು ಇಂತಹ ಘಟನಾವಳಿಗಳು ಮತ್ತೊಂದು....

**ಶ್ರೀ ಕೆ.ಎಸ್. ಈಶ್ವರಪ್ಪ:** ಕಾನೂನು ಬಗ್ಗೆ ಮಾತನಾಡುವವರು ತಾವು ಕಾನೂನು ಕೈ ಬಿಟ್ಟು ಹೋಗುತ್ತಿದ್ದೀರಿ. ನಾನು ಅದನ್ನು ಹೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, Law & Order ಬಗ್ಗೆ ಅವರು ಪ್ರಸ್ತಾಪ ಮಾಡುವುದಕ್ಕೆ ನನ್ನ ಅಭ್ಯಂತರವೇನೂ ಇಲ್ಲ.

**ಶ್ರೀ ಮಲ್ಲಿಕಾರ್ಜುನ ಖರ್ಗೆ:** ನಾನು ಮಾತನಾಡುತ್ತಿದ್ದೇನೆ. ತಾವು ಆಮೇಲೆ ಹೇಳಿ.

**ಶ್ರೀ ಕೆ.ಎಸ್. ಈಶ್ವರಪ್ಪ:** ಇದನ್ನು ಆಮೇಲೆ ಹೇಳುವುದಲ್ಲ ಸಾರ್. ನೀವು ಇದ್ದಕ್ಕಿದ್ದ ಹಾಗೆ ಕಾನೂನಿನ ಬಗ್ಗೆ ಮಾತನಾಡುತ್ತಿರುವವರು, ಈಗ ತಾವು ಕಾನೂನು

ಬಿಟ್ಟು ಹೋಗುತ್ತಿದ್ದೀರಿ. ಆ ಬಗ್ಗೆ ನಾನು ಹೇಳುತ್ತಿರುವುದು. ಮಾನ್ಯ ಅಧ್ಯಕ್ಷರೆ, ಇವರು ಕಾನೂನು ಬಗ್ಗೆ ಮಾತನಾಡುತ್ತಿರುವುದು. ಆದರೆ ಅವರು ಕಾನೂನು ಬಿಟ್ಟೇ ಹೋಗುತ್ತಿದ್ದಾರೆ. ಯಾವ ಸೆಕ್ಷನ್ ಅಡಿಯಲ್ಲಿ ಮಾತನಾಡುತ್ತಿದ್ದಾರೆ ಎಂಬುದನ್ನು ಅವರು ಹೇಳಬೇಕಲ್ಲವೆ.?

**ಶ್ರೀ ಮಲ್ಲಿಕಾರ್ಜುನ ಖರ್ಗೆ:–** ಏನು, ತಾವು ವಾದ ವಿವಾದ ಮಾಡುತ್ತಿದ್ದೀರಿ? ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ಮನವಿ ಮಾಡುತ್ತಿದ್ದೇನೆ. ಈಗ ತಾವು ಕುಳಿತುಕೊಳ್ಳಿ ಎಂದರೆ ನಾನು ಕುಳಿತುಕೊಳ್ಳುತ್ತೇನೆ ಅಥವಾ ಅವರು ಹೇಳುವುದನ್ನು ಕೇಳಿದ ಮೇಲೆ ನೀವು ಹೇಳಿ ಎಂದು ನನಗೆ ಹೇಳಿದರೆ ನಾನು ಹೇಳುತ್ತೇನೆ. ಎರಡರಲ್ಲಿ ಒಂದು ಆಗಲಿ. ಅದನ್ನು ಬಿಟ್ಟು ಇಲ್ಲಿ ಕುಸ್ತಿ ಆಡುವ ರೀತಿಯಲ್ಲಿ ಬಂದರೆ.

**ಶ್ರೀ ಟಿ.ಬಿ. ಜಯಚಂದ್ರ:–** ಪ್ರಿಲಿಮನರಿ ಸಬ್‌ಮಿಶನ್‌ಗೆ ಮಾನ್ಯ ಅಧ್ಯಕ್ಷರು ಅವಕಾಶ ಕೊಟ್ಟಮೇಲೆ ಮಾನ್ಯ ಸಚಿವರು ಹೀಗೇಕೆ ಮಾತನಾಡುತ್ತಿದ್ದಾರೆ.

**(ಗೊಂದಲ)**

**ಅಧ್ಯಕ್ಷರು:–** ಮಾನ್ಯ ಈಶ್ವರಪ್ಪನವರೆ,

**ಶ್ರೀ ಕೆ.ಎಸ್.ಈಶ್ವರಪ್ಪ:–** ನಿಮ್ಮಗಳ ಕುಸ್ತಿ ಮಧ್ಯೆ ನಾನು ಬರುವುದಿಲ್ಲ. ಖಂಡಿತ ಇಲ್ಲಿ ಕುಸ್ತಿ ಮಾಡಲು ನಾವು ಬಂದಿಲ್ಲ.

**(ಗೊಂದಲ)**

**ಶ್ರೀ ಮಲ್ಲಿಕಾರ್ಜುನ ಖರ್ಗೆ:–** ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆ ಬಗ್ಗೆ ನಾನು ಓದುತ್ತೇನೆ. ನೀವು ಇದರ ಬಗ್ಗೆ ನಿರ್ಣಯ ತೆಗೆದುಕೊಳ್ಳಿ. ನಿಮ್ಮ ನಿರ್ಣಯಕ್ಕೆ ನಾವು ತಲೆಬಾಗುತ್ತೇವೆ.

**ಶ್ರೀ ಸಿದ್ದು ಸವದಿ:–** ಮಾನ್ಯ ಅಧ್ಯಕ್ಷರೆ, ಪ್ರಶ್ನೋತ್ತರವನ್ನು ತೆಗೆದುಕೊಳ್ಳಿ.

**ಅಧ್ಯಕ್ಷರು:–** ವಿರೋಧ ಪಕ್ಷದ ನಾಯಕರು ನಿಲುವಳಿ ಸೂಚನೆ ಬಗ್ಗೆ ಓದುತ್ತಾರೆ. ಅದು ಆದನಂತರ ಪ್ರಶ್ನೋತ್ತರವನ್ನು ತೆಗೆದುಕೊಳ್ಳುತ್ತೇನೆ. ದಯವಿಟ್ಟು ಕುಳಿತುಕೊಳ್ಳಿ.

**ಶ್ರೀ ಮಲ್ಲಿಕಾರ್ಜುನ ಖರ್ಗೆ:–** ಮಾನ್ಯ ಅಧ್ಯಕ್ಷರೆ, ನಾನು ರೂಲ್ 60 ರ ಮೇಲೆ ದಿನಾಂಕ: 19–02–2009 ರಂದು ವಿಧಾನಸಭೆಯ ಅಧಿವೇಶನದಲ್ಲಿ ಪ್ರಸ್ತಾಪಿಸಲು ಈ ಕೆಳಕಂಡ ವಿಷಯದ ಬಗ್ಗೆ ನಿಲುವಳಿ ಸೂಚನೆಯನ್ನು ಕೊಡುತ್ತಿದ್ದೇನೆ. Moral Policing ನೆಪದಲ್ಲಿ ಸಂಘಟನೆಗಳು ಕಾರ್ಯಕರ್ತರು ಕಾನೂನು ಕೈಗೆತ್ತಿಕೊಂಡು ಮಂಗಳೂರು ನಗರದಲ್ಲಿ ಅಮಾಯಕ ಹೆಣ್ಣು ಮಕ್ಕಳ ಮೇಲೆ ದೈಹಿಕವಾಗಿ ಹಲ್ಲೆ ನಡೆಸಿದ್ದಾರೆ. ಬಸ್‌ನಲ್ಲಿ ಸಂಚರಿಸುತ್ತಿದ್ದ ಮಂಜೇಶ್ವರ್ ಶಾಸಕರ ಮಗಳ ಮೇಲೆ ದೈಹಿಕ ಹಲ್ಲೆ ನಡೆಸಿದ್ದಾರೆ. ಬೆಂಗಳೂರು ನಗರದಲ್ಲಿ ಕೊಲೆ, ಸುಲಿಗೆ ಪ್ರಸಂಗಗಳು

ಸತತವಾಗಿ ನಡೆಯುತ್ತಿದ್ದು ನಾಗರೀಕರು ಭಯಭೀತಿಯ ವಾತಾವರಣದಲ್ಲಿ ಜೀವನ ಸಾಗಿಸುತ್ತಿದ್ದಾರೆ. ಬಳ್ಳಾರಿಯಲ್ಲಿ ಮೆರವಣಿಗೆ ನಡೆಸುತ್ತಿದ್ದ ರೈತರ ಮೇಲೆ ವಿನಾಕಾರಣ ಗೋಲಿಬಾರ್, ಮೈಸೂರಿನಲ್ಲಿ ಪರಿವಾರ ಜನಾಂಗದವರ ಮೇಲೆ ಲಾಠಿ ಛಾರ್ಜ್ ಹಾಗೂ ಅಶ್ರುವಾಯು ಪ್ರಯೋಗ, ಭಯೋತ್ಪಾದನೆ ವಿರೋಧಿ ಅಭಿಯಾನ ಹೆಸರಿನಲ್ಲಿ ಸರ್ಕಾರಿ ಖರ್ಚಿನಲ್ಲಿ ಸಂಘ ಪರಿವಾರದ ಪ್ರಚಾರ ನಡೆಸುತ್ತಿರುವ ಸರ್ಕಾರದ ಕ್ರಮವನ್ನು ವಿರೋಧಿಸಿದ್ದ ವಿದ್ಯಾರ್ಥಿ ಸಂಘಟನೆಗಳ ಮತ್ತು ವಿದ್ಯಾರ್ಥಿಗಳ ಮೇಲೆ ಹಲ್ಲೆ ನಡೆಸಿ ಬಂಧಿಸಿ ಮೊಕದ್ದಮೆಗಳನ್ನು ಹಾಕಲಾಗಿದೆ. ಹೀಗೆ ರಾಜ್ಯದಲ್ಲಿ ಕಾನೂನು ವ್ಯವಸ್ಥೆ ಕುಸಿದು ಬಿದ್ದು Rule of Law ಇಲ್ಲವಾಗಿದೆ. ಈ ಬಗ್ಗೆ ಚರ್ಚಿಸಲು ಅವಕಾಶವನ್ನು ಕೊಡಬೇಕೆಂದು ನಾನು ಕೇಳುತ್ತಿದ್ದೇನೆ.

**ಅಧ್ಯಕ್ಷರು:–** ಮಾನ್ಯ ವಿರೋಧಿ ಪಕ್ಷದ ನಾಯಕರಲ್ಲಿ ನನ್ನ ವಿನಂತಿ ಏನೆಂದರೆ, ಪ್ರಶ್ನೋತ್ತರ ಅವಧಿಯ ಕಲಾಪ ಮುಗಿದ ಮೇಲೆ ನೀವು ಇದರ ಬಗ್ಗೆ ಪ್ರಿಲಿಮನರಿ ಸಬ್‌ಮಿಶನ್ ಮಾಡಿ. ಆಮೇಲೆ ಅದರ ಬಗ್ಗೆ ಸರ್ಕಾರದವರು ಏನು ಹೇಳುತ್ತಾರೆ ಅದನ್ನು ಕೇಳೋಣ. ಏಕೆಂದರೆ ಈಗ ಪ್ರಶ್ನೋತ್ತರ ಅವಧಿಯಲ್ಲಿ ಬಹಳ ಜನ ಶಾಸಕರು ಭಾಗವಹಿಸಬೇಕೆಂದಿದ್ದಾರೆ. ಆದುದರಿಂದ ಪ್ರಶ್ನೋತ್ತರ ಆದಮೇಲೆ ನಿಮ್ಮದನ್ನು ತೆಗೆದುಕೊಳ್ಳುತ್ತೇನೆ.

**ಶ್ರೀ ಮಲ್ಲಿಕಾರ್ಜುನ ಖರ್ಗೆ:–** ಆಮೇಲೆ ತೆಗೆದುಕೊಳ್ಳಿ. ನಿಮಗೆ ಇದರ ಬಗ್ಗೆ ಮನವರಿಕೆಯಂತೂ ಆಗಿದೆಯಲ್ಲವೆ. ಗೋಲಿಬಾರ್, ಬಳ್ಳಾರಿಯಲ್ಲಿ ನಡೆದಂಥ ಘಟನೆ, ಮಂಗಳೂರಿನಲ್ಲಿ ನಡೆದಂಥ ಘಟನೆ, ಬೆಂಗಳೂರಿನಲ್ಲಿ ನಡೆದಂಥ ದರೋಡೆ, ಸುಲಿಗೆ, ಕೊಲೆ, ಇವೆಲ್ಲದರ ಬಗ್ಗೆ ನಿಮಗೆ ಈಗಾಗಲೇ ಮನವರಿಕೆಯಾಗಿದೆಯೆಂದರೆ ಇದನ್ನು ಬೇಕಾದರೆ ಆಮೇಲೆಯೇ ತೆಗೆದುಕೊಳ್ಳೋಣ.

**ಅಧ್ಯಕ್ಷರು:–** ಈ ನಿಲುವಳಿ ಸೂಚನೆ ಮೇಲೆ ತಾವೇನು ಪ್ರಿಲಿಮನರಿ ಸಬ್‌ಮಿಶನ್ ಮಾಡಬೇಕೋ ಅದನ್ನು ಪ್ರಶ್ನೋತ್ತರ ಅವಧಿ ಆದಮೇಲೆ ನಾನು ತೆಗೆದುಕೊಳ್ಳುತ್ತೇನೆ.

**ಶ್ರೀ ಮಲ್ಲಿಕಾರ್ಜುನ ಖರ್ಗೆ:–** ನೀವು ಯಾವಾಗಲಾದರೂ ತೆಗೆದುಕೊಳ್ಳಿ. ಆದರೆ ನಿಮಗೆ ಮನವರಿಕೆಯಾದರೆ ಸಾಕು. ಪರಿವಾರ ಜನಾಂಗದವರ ಮೇಲೆ ಲಾಠಿ ಛಾರ್ಜ್, ಈಗ ನೋಡಿ ಮೇಯರ್ ಎಲೆಕ್ಷನ್‌ನಲ್ಲಿಯೂ ಕೂಡ ಗಲಾಟೆಯಾಗಿದೆ.

**ಅಧ್ಯಕ್ಷರು:–** ಪ್ರಶ್ನೋತ್ತರ ಅವಧಿ ಮುಗಿದ ತಕ್ಷಣ ಇವೆಲ್ಲದರ ಬಗ್ಗೆ ತಾವು ಹೇಳುವಿರಂತೆ. ದಯವಿಟ್ಟು ಈಗ ಸಹಕರಿಸಿ. ಈಗ ಪ್ರಶ್ನೋತ್ತರ. ಮೊದಲನೆಯ ಪ್ರಶ್ನೆ ಮಾನ್ಯ ಸಿದ್ದು ಸವದಿಯವರದ್ದು.